# ಗ್ಯಾಂಗ್‌ನೆಕ್ಸ್ಟ್ ಸ್ಪರ್ಧೆಗೆ ಆಯ್ಕೆ

ಬೆಂಗಳೂರು,ಫೆ.8–ಟಿ.ಜಾನ್ ಮ್ಯಾನೇಜ್‌ಮೆಂಟ್ ಕಾಲೇಜಿನ ವಿದ್ಯಾರ್ಥಿಗಳು ಸ್ಯಾಮ್‌ಸಂಗ್ ಎಮ್‌ಟಿವಿ ಗ್ಯಾಂಗ್‌ನೆಕ್ಸ್ಟ್ ಸ್ಪರ್ಧೆಯ ರಾಷ್ಟ್ರ ಮಟ್ಟದ ಸ್ಪರ್ಧೆಗೆ ಆಯ್ಕೆಗೊಂಡಿದ್ದಾರೆ.

ಪ್ರಸ್ತುತ ಸ್ಪರ್ಧೆಯು ಕಾಲೇಜು ಮಟ್ಟದಲ್ಲಿ ನಡೆಯುವ ದೇಶದ ಅತ್ಯಂತ ದೊಡ್ಡ ಸ್ಪರ್ಧೆಯಾಗಿದೆ. ಕಾಲೇಜಿನ ತಂಡದ ಹೆಸರು ಕೋಲ್ಡ್‌ವಾರ್. 50 ತಂಡಗಳು ಭಾಗವಹಿಸಿದ ಸ್ಪರ್ಧೆಯಲ್ಲಿ ಟಿ.ಜಾನ್ ಕಾಲೇಜಿನ ಕೋಲ್ಡ್‌ವಾರ್ ಗ್ಯಾಂಗ್‌ಅನ್ನು ರಾಷ್ಟ್ರ ಮಟ್ಟದ ಸ್ಪರ್ಧೆಗೆ ಆಯ್ಕೆ ಮಾಡಲಾಗಿದೆ.

ವಿಜೇತ ತಂಡದ ನಾಯಕ–ವಿಜೇಶ್ ಹಾಗೂ ಸದಸ್ಯರು ಅತುಲ್ ಅಬ್ರಾಂ, ಯುನಿಕಾ, ಭವ್ಯಾ, ರಂಗಾವಾಲ, ವಿದ್ಯಾ ಜತನ್. ಪ್ರತಿ ಕಾಲೇಜುಗಳಲ್ಲಿ ಎಮ್‌ಟಿವಿ ಸ್ಯಾಮ್‌ಸಂಗ್ ರಾಯಭಾರಿಗಳನ್ನು ಹೊಂದುವ ಆಪೇಕ್ಷೆಯ ಮೇರೆಗೆನಡೆಸುತ್ತಿರುವ ಈ ಸ್ಪರ್ಧೆಗೆ ರಾಷ್ಟ್ರವ್ಯಾಪಿ ಹಲವು ನಗರಗಳ ಪ್ರತಿಷ್ಠಿತ ಕಾಲೇಜುಗಳಿಂದ ರಾಯಭಾರಿಗಳನ್ನು ಆಯ್ಕೆಗೊಳಿಸಲಾಗುತ್ತಿದೆ.